ಶ್ರೀ ಜಬ್ಬಾರ್ ಖಾನ್ ಹೊನ್ನಳ್ಳಿ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಇದರ ಬಗ್ಗೆ ಮಾನ್ಯ ಸದಸ್ಯರು ಸ್ವತಃ ಭೇಟಿಯಾಗಿ ಚರ್ಚಿಸಿದ್ದೀರಿ. ಅದರ ಪ್ರಕಾರ ರೇಟಿನ ಬಗ್ಗೆ ಏನೂ ಇಲ್ಲ, ಎಲ್ಲರಿಗೂ ಯೋಗ್ಯವಾಗಿರುವಂತಹ ಸ್ಥಳ ತಾವು ಕಂಡುಹಿಡಿದರೆ ನಾವು ಅದರ ಬಗ್ಗೆ ಪರಿಶೀಲಿಸಿ ಸಹಾಯ ಮಾಡುವುದಕ್ಕೆ ಆಗುತ್ತದೆ.

ರೈತರ ಪಂಪಸೆಟ್‌ಗಳಿಗೆ ಕಡಿಮೆ ದರದಲ್ಲಿ ವಿದ್ಯುತ್ ಪೂರೈಕೆ

10(100) ಶ್ರೀ ಗೋವಿಂದ ಎಂ. ಕಾರಜೋಳ(ಮುಧೋಳ್) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರೈತರು ಸ್ವಂತ ಖರ್ಚಿನಿಂದ ಸಾಮೂಹಿಕ ಏತ ನೀರಾವರಿಗಳನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು;

ಆ) ರೈತರ ಸಾಮೂಹಿಕ ಏತ ನೀರಾವರಿ ಯೋಜನೆಗೆ ಉಪಯೋಗಿಸುತ್ತಿರುವ 10 ಅಶ್ವ ಶಕ್ತಿಗಿಂತಲೂ ಹೆಚ್ಚಿನ ಪಂಪುಗಳಿಗೆ ಮೀಟರ್ ಅಳವಡಿಸಿ ಹೆಚ್ಚಿನ ವಿದ್ಯುತ್ ದರವನ್ನು ನಿಗದಿ ಮಾಡಿರುವುದರಿಂದ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ರೈತರ ಕೃಷಿಗೆ ಉಪಯೋಗಿಸುವ 10 ಅಶ್ವ ಶಕ್ತಿಗಿಂತ ಹೆಚ್ಚಿನ ಅಶ್ವಶಕ್ತಿ ಪಂಪುಗಳಿಗೂ ಕೂಡ ಒಂದೇ ದರವನ್ನು ನಿಗದಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು;

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ರಾಜ್ಯದಲ್ಲಿ ಖಾಸಗೀ ಸಾಮೂಹಿಕ ಏತ ನೀರಾವರಿ ಯೋಜನೆಗಳು ವಿಶೇಷವಾಗಿ ಬೆಳಗಾವಿ, ಬಾಗಲಕೋಟೆ ಬಿಜಾಪುರ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಗಳಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇಂತಹ ಖಾಸಗೀ ಸಹಕಾರಿ ಏತ ನೀರಾವರಿ ಯೋಜನೆಗಳ ಒಟ್ಟು ಸಂಖ್ಯೆ 274.

ಆ) 10 ಹೆಚ್.ಪಿ.ಗಿಂತಲೂ ಹೆಚ್ಚಿನ ಅಶ್ವ ಶಕ್ತಿ ಇರುವ ನೀರಾವರಿ ಪಂಪ್‌ಸೆಟ್ಟುಗಳಿಗೆ ಮೀಟರ್ ಅಳವಡಿಸಿ. ವಿದ್ಯುತ್ ಉಪಯೋಗಕ್ಕನುಗುಣವಾಗಿ ಬಿಲ್ ಮಾಡಲಾಗುತ್ತಿದೆ. ಇದೇ ರೀತಿ ಏತ ನೀರಾವರಿ ಸ್ಥಾವರಗಳಿಗೂ ಮಾಡಲಾಗುತ್ತಿದೆ. ಆದರೆ ದರ ಆಕರಣೆಯಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ನಿಯೋಗದ ಆದೇಶದ ಪ್ರಕಾರ ಎಲ್.ಟಿ.ಯಲ್ಲಿ (400 ವೋಲ್ಟ್ಸ್) ವಿದ್ಯುತ್ ಸರಬರಾಜು ಪಡೆಯುವ 10 ಅಶ್ವ ಶಕ್ತಿಗೂ ಮೇಲ್ಪಟ್ಟ ಸಾಮೂಹಿಕ ಏತ ನೀರಾವರಿ ಯೋಜನಗಳಿಗೆ 10 ಅಶ್ವಶಕ್ತಿ ವರೆಗಿನ ವೈಯಕ್ತಿನ ನೀರಾವರಿ ಪಂಪ್‌ಸೆಟ್ಟುಗಳಿಗೆ ಅನ್ವಯವಾಗುವ ಕಡಿಮೆ ವಿದ್ಯುತ್ ದರವನ್ನೇ ವಿಧಿಸಲಾಗುತ್ತಿದೆ. ಆದರೆ ಇವುಗಳಿಗೆ ಹೆಚ್.ಟಿ.ಯಲ್ಲಿ 11 ಕಿಲೋ ವೋಲ್ಟ್ಸ್ ಮತ್ತು ಅದಕ್ಕಿಂತ ಹೆಚ್ಚಿನ ವೋಲ್ಟೇಜ್) ವಿದ್ಯುತ್ ಸರಬರಾಜನ್ನು ಮಾಡಿದಲ್ಲಿ ಕರ್ನಾಟಕ ವಿದ್ಯುತ್ ನಿಯಮತ್ರಣ ಆಯೋಗವು ಪ್ರತ್ಯೇಕವಾಗಿ ನಿಗದಿಪಡಿಸಿರುವ ದರವನ್ನು ವಿಧಿಸಲಾಗುತ್ತಿದೆ. ವಿದ್ಯುತ್ ದರಗಳನ್ನು ವಿಧಿಸುವಿಕೆಯ ವಿಚಾರದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶವನ್ನು ಪಾಲಿಸಬೇಕಾಗಿರುತ್ತದೆ.

ದರಗಳು ಈ ರೀತಿ ಇವೆ:–

1) 10 ಅಶ್ವಶಕ್ತಿ ಸೇರಿದಂತೆ 10 ಅಶ್ವಶಕ್ತಿವರೆಗಿನ ಪಂಪ್‌ಸೆಟ್ಟುಗಳು (ಎಲ್.ಟಿ. ಸಾಮೂಹಿಕ ಏತ ನೀರಾವರಿ ಯೋಜನೆಗಳಿಗೂ ಅನ್ವಯಿಸುತ್ತದೆ)

ನಿಗದಿತ ಶುಲ್ಕಗಳು:

ಮಂಜೂರಾದ ಹೊರೆಯ ಪ್ರತಿ ಹೆಚ್.ಪಿ.ಗೆ ಅಥವಾ ಅದರ ಭಾಗಕ್ಕೆ ಪ್ರತಿ ತಿಂಗಳಿಗೆ ರೂ.20.00

ಮತ್ತು

ವಿದ್ಯುತ್ ಬಳಕೆ ಶುಲ್ಕಗಳು:

ಆ ತಿಂಗಳಲ್ಲಿ ಬಳಸಿದ ಯುನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ 40 ಪೈಸೆ.

2) ಹೆಚ್.ಟಿ. ಏತ ನೀರಾವರಿ ಯೋಜನೆಗಳು ಮತ್ತು ಏತ ನೀರಾವರಿ ಸಂಘಗಳು: ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವಶಕ್ತಿಗೆ ವಾರ್ಷಿಕ ಕನಿಷ್ಠ 1000 ರೂ.ಗಳ ನಿಬಂಧನೆಗೆ ಒಳಪಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ ಪ್ರತಿ ಯೂನಿಟ್ಟಿಗೆ 80 ಪೈಸೆಯಂತೆ.

ಆದರೆ ಸರಾಸರಿ ವಿದ್ಯುತ್ ಸರಬರಾಜು ದರ ಪ್ರತಿ ಯೂನಿಟ್‌ಗೆ ರೂ. 3.73 ಆಗಿರುತ್ತದೆ.

ಇ) ರೈತರಿಗೆ ಸಹಾಯ ಮಾಡುವ ಉದ್ದೇಶದಿಂದ ಸರ್ಕಾರವು ಇವರುಗಳಿಗೆ ಅತಿ ಕಡಿಮೆ ವಿದ್ಯುತ್ ದರ ಆಕರಿಸಿ ಕ.ವಿ.ಪ್ರ.ನಿ.ನಿ./ವಿದ್ಯುತ್ ಸರಬರಾಜು ಕಂಪನಿಗಳಿಗೆ ಪ್ರತೀ ವರ್ಷವು ಸಬ್ಸಿಡಿ ಬಿಡುಗಡೆ ಮಾಡುತ್ತಿದೆ.

ವಿವಿಧ ಪ್ರವರ್ಗಗಳಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ ನೀಡಲಾಗುವ ಸಬ್ಸಿಡಿಯ ವಿವರಗಳು ಕೆಳಕಂಡಂತಿದೆ:–

ನೀರಾವರಿ ಪಂಪ್‌ಸೆಟ್ಟುಗಳ ಪ್ರವರ್ಗ	ಪ್ರತಿ ಯೂನಿಟ್ ವಿದ್ಯುತ್‌ಗೆ ವಿಧಿಸಲಾಗುತ್ತಿರುವ ಸರಾಸರಿ ದರ (ರೂ.ಗಳಲ್ಲಿ)	ಪ್ರತಿ ಯೂನಿಟ್ ವಿದ್ಯುತ್ ಸರಬರಾಜಿಗೆ ತಗಲುವ ವೆಚ್ಚ ರೂ.ಗಳಲ್ಲಿ	ಪ್ರತಿ ಯೂನಿಟ್‌ಗೆ ಸಹಾಯಧನ (ರೂ.ಗಳಲ್ಲಿ)
10 ಅ.ಸ.ಗಿಂತ ಕೆಳಗಿನ ಪಂಪುಸೆಟ್ಟುಗಳು (ಎಲ್.ಟಿ. ಏತ ನೀರಾವರಿ ಸಹಿತ) **ವಿದ್ಯುತ್ ದರ: ನಿಗದಿತ ಶುಲ್ಕಗಳು:** ಮಂಜೂರಾದ ಹೊರೆಯ ಪ್ರತಿ ಹೆಚ್.ಪಿ.ಗೆ ಅಥವಾ ಅದರ ಭಾಗಕ್ಕೆ ಪ್ರತಿ ತಿಂಗಳಿಗೆ ರೂ.20.00 ಮತ್ತು **ವಿದ್ಯುತ್ ಬಳಕೆ ಶುಲ್ಕಗಳು:** ಆ ತಿಂಗಳಲ್ಲಿ ಬಳಸಿದ ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ 40 ಪೈಸೆ	0.63	3.73	3.10

ಮೀಟರನ್ನು ಅಳವಡಿಸುವವರೆಗೆ ಪ್ರತಿ ತಿಂಗಳಿಗೆ ಪ್ರತಿ ಹೆಚ್.ಪಿ.ಗೆ ರೂ.60 ರಂತೆ ಸಮಾನ ದರವನ್ನು ವಿಧಿಸಲಾಗುವುದು.			
10 ಅ.ಶ.ಗೂ ಮೇಲ್ಪಟ್ಟ ಪಂಪ್‌ಸೆಟ್ಟುಗಳು: ವಿದ್ಯುತ್ ದರ: ಮಂಜೂರಾದ ವಿದ್ಯುತ್ ನ ಪ್ರತಿ ಅಶ್ವ ಶಕ್ತಿಗೆ ವಾರ್ಷಿಕ ಕನಿಷ್ಠ ರೂ 840ರ ಮಿತಿಗೆ ಒಳಪಟ್ಟು ಬಳಸಿದ ಎಲ್ಲಾ ಯೂನಿ ಟ್ಸುಗಳಿಗೆ ಪ್ರತಿ ಯೂನಿಟ್ಟಿಗೆ 175 ಪೈಸೆ. ಏತ ನೀರಾವರಿ ಯೋಜನೆಗಳು (ಹೆಚ್.ಟಿ. ಯಲ್ಲಿ ವಿದ್ಯುತ್ ಸರಬರಾಜು)	1.75	3.75	1.98
ವಿದ್ಯುತ್ ದರ: ಮಂಜೂರಾದ ವಿದ್ಯುತ್‌ನ ಪ್ರತಿ ಅಶ್ವಶಕ್ತಿಗೆ ವಾರ್ಷಿಕ ಕನಿಷ್ಠ 1000 ರೂ.ಗಳ ನಿಬಂಧನೆಗೆ ಒಳೊಟ್ಟು ಬಳಸಿರುವ ಎಲ್ಲಾ ಯೂನಿಟ್ಟುಗಳಿಗೆ ಪ್ರತಿ ಯೂನಿಟ್ಟಿಗೆ 80 ಪೈಸೆಯಂತೆ.	0.8	3.73	2.93

2004–2005ರ ವರ್ಷದಲ್ಲಿ ಒಟ್ಟು 2747 ಕೋಟಿ ರೂ.ಗಳ ಕೊರತೆ ಇದೆ. ಇದರಲ್ಲಿ 875 ಕೋಟಿ ರೂ.ಗಳಷ್ಟು ಹಣ ಇತರೇ ವರ್ಗಗಳಿಂದ (ಕೈಗಾರಿಕೆ ವಾಣಿಜ್ಯ ಇತ್ಯಾದಿ) ಕ್ರಾಸ್ ಸಬ್ಸಿಡಿಯಾಗಿ ಒದಗಲಿದೆ. ಉಳಿದ ನಿವ್ವಳ ಕೊರತೆ 1872 ಕೋಟಿ ರೂ.ಗಳನ್ನು ಸರ್ಕಾರ ಭರಿಸಬೇಕಾಗಿರುತ್ತದೆ. ಈ ವರ್ಷದ ಆಯವ್ಯಯದಲ್ಲಿ 1110 ಕೋಟಿ ರೂ.ಗಳನ್ನು ಮಾತ್ರ ಒದಗಿಸಲಾಗಿದೆ.

ಆದುದರಿಂದ ವಿದ್ಯುತ್ ದರಗಳಲ್ಲಿ ಯಾವುದೇ ರೀತಿಯ ಕಡಿತವನ್ನು ಮಾಡಬೇಕಾದಲ್ಲಿ ವಿದ್ಯುತ್ ಕಾಯಿದೆ 2003ರ ಸೆಕ್ಷನ್ 65ರ ಅನ್ವಯ ಸರ್ಕಾರದಿಂದ ಆಯವ್ಯಯದಲ್ಲಿ ಹೆಚ್ಚುವರಿ ಸಹಾಯ ಧನದ ಬೆಂಬಲ ಬೇಕಾಗುತ್ತದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಸಾರ್ವಜನಿಕ ಆಲಿಕೆಗಳನ್ನು ಮುಕ್ತ ರೀತಿಯಲ್ಲಿ ನಡೆಸಿದ ನಂತರವೇ ವಿದ್ಯುತ್ ದರಗಳನ್ನು ನಿಗದಿಪಡಿಸಿ ಆದೇಶಗಳನ್ನು ನೀಡುತ್ತಿರುವುದರಿಂದ. ಸಾಮೂಹಿಕ ಏತ ನೀರಾವರಿ ಸಂಘಗಳೂ ಸಹ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿದ್ಯುತ್ ದರಗಳ ಪರಿಷ್ಕರಣೆಯ ಸಮಯದಲ್ಲಿ ನಡೆಸುವ ಸಾರ್ವಜನಿಕ ಆಲಿಕೆಗಳಲ್ಲಿ ಭಾಗವಹಿಸಲು ಸ್ವತಂತ್ರರಿರುದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಪ್ರಶ್ನೆಯನ್ನು ಕೇಳಿದ್ದೆ, ಕರ್ನಾಟಕ ರಾಜ್ಯದಲ್ಲಿ ರೈತರು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿಕೊಂಡಂತಹ ಏತ ನೀರಾವರಿ ಯೋಜನೆಗಳ ಸಂಖ್ಯೆ ಎಷ್ಟು ಎಂದು? ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ 274 ಎಂದು ಹೇಳಿದ್ದಾರೆ. ಅದರಲ್ಲಿ ವಿಶೇಷವಾಗಿ ಬಿಜಾಪುರ, ಬಾಗಲಕೋಟೆ, ಬೆಳಗಾಂ ಜಿಲ್ಲೆಗಳಲ್ಲೇ ಈ ಯೋಜನೆಗಳು ಇದೆ ಎಂದು ಹೇಳಿದ್ದಾರೆ. ಇವತ್ತು ನಾನು ಅವರಿಗೆ ಏನು ಕೇಳಿದ್ದೆ ಎಂದರೆ, ರೈತರು ಹಾಕಿಕೊಂಡಂತಹ ಏತ ನೀರಾವರಿ ಪಂಪ್‌ಸೆಟ್ಟುಗಳು ಏನಿವೆ, ಒಂದೇ ದರ ಮಾಡಿ ಎಂದು ನಾನು ಹೇಳಿದ್ದೆ. ಕೃಷಿಗೆ ಉಪಯೋಗ ಮಾಡುವಂತಹ ಏನು ಪಂಪ್‌ಸೆಟ್ಟುಗಳು ಇವೆ, ನೀರಾವರಿ ಯೋಜನೆಗಳಿಗೆ ಉಯೋಗಿಸುತ್ತಾರೆ, ರೈತರು ಸರ್ಕಾರಕ್ಕೆ ಉಪಕಾರವನ್ನು ಮಾಡಿದ್ದಾರೆ, ಸ್ವಂತ ಖರ್ಚಿನಲ್ಲಿ ಯೋಜನೆಗಳನ್ನು ಮಾಡಿಕೊಂಡಿದ್ದಾರೆ. ಅವರಿಗೆ ಸರ್ಕಾರ ಇನ್ನು ಸ್ವಲ್ಪ ಕಡಿಮೆ ರೇಟಿನಲ್ಲಿ ಕೊಡಬೇಕಾಗಿತ್ತು ಕಡಿಮೆ ರೇಟ್‌ನಲ್ಲಿ ಕೊಡುವುದು ಹಾಗಿರಲಿ ಪ್ರತಿ ವರ್ಷ ತಾವು ಏನು ಪ್ಲಾಟ್ ರೇಟ್‌ನ್ನು ಮಾಡಿದ್ದೀರಿ, ಪ್ರತಿ ಹೆಚ್‌ಪಿಗೆ 540 ರೂಪಾಯಿ ಏನು ಮಾಡಿದ್ದೀರಿ, ಅದೇ ದರವನ್ನು ಕೂಡ ಈ ರೈತರು ಮಾಡಿಕೊಂಡಂಥ ಏತ ನೀರಾವರಿ ಅನ್ವಯವಾಗಬೇಕು ಎಂದು ನಾನು ಕೇಳಿದ್ದೆ. ಆದರೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಮೀಟರ್‌ಗಳನ್ನು ಅಳವಡಿಸಿ 1.75 ಪೈಸೆ ಪ್ರತಿ ಯೂನಿಟ್‌ಗೆ ತುಂಬಬೇಕಾಗುತ್ತದೆ. ಆ ರೇಟ್‌ನ್ನು ಹಾಕಿದ್ದೇವೆಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಅದನ್ನು ಕೇಳುವುದಕ್ಕೆ ಬಯಸುತ್ತಿಲ್ಲ. ನಾನು ಮಾನ್ಯ ಸಚಿವರಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ, ತಾವು ರೈತ ಕುಟುಂಬದಿಂದ ಬಂದವರಾಗಿದ್ದೀರಿ, ಏನು ರೈತರು ಸರ್ಕಾರಕ್ಕೆ ಉಪಕಾರ ಮಾಡಿ ತಮ್ಮ ಸ್ವಂತ ಹಣದಲ್ಲಿ ಸಾಲಸೋಲವನ್ನು ಮಾಡಿ ಯೋಜನೆಗಳನ್ನು ಮಾಡಿಕೊಂಡಿದ್ದಾರೆ ಅವರಿಗೂ ಕೂಡ ಪ್ರತಿ ವರ್ಷಕ್ಕೆ 1 ಹೆಚ್‌ಪಿಗೆ 540 ರೂಪಾಯಿಗಳನ್ನು ಹಾಕಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ. ಯಾವ ರೀತಿಯಾಗಿ ರೈತರಿಗೆ ಸಮಸ್ಯೆ ಯಾಗಿದೆ ಎಂಬುದನ್ನು ಒಂದು ಯೋಜನೆಯ ಬಗ್ಗೆ ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ನಾನು ಹೆಚ್ಚು ಹೊತ್ತು ಸಮಯವನ್ನು ತೆಗೆದುಕೊಳ್ಳುವುದಿಲ್ಲ. 1983ರಲ್ಲಿ ನನ್ನ ಮತಕ್ಷೇತ್ರದ ಮುಧೋಳ ತಾಲ್ಲೂಕಿನ ಇಂಗಳಗಿ ಗ್ರಾಮದ ರೈತರು 106 ಜನರು ಸೇರಿ 316 ಎಕರೆಗೆ ಸ್ವಂತ ಖರ್ಚಿನಲ್ಲಿ ಏತ ನೀರಾವರಿಯನ್ನು ಮಾಡಿದ್ದಾರೆ. ಅವರು ಮಾಡಿದ ನಂತರ 1983ರಿಂದ 2002ರವರೆಗೆ ಅವರು ಕಟ್ಟಿರತಕ್ಕಂಥ ವಿದ್ಯುತ್ ಬಾಕಿ ಬಿಲ್ಲು ಎಷ್ಟು ಎಂದರೆ ಎಂಬತ್ತು ಲಕ್ಷ ರೂಪಾಯಿಗಳು. ಅಂದರೆ ತಾವೇ ಇಮ್ಯಾಜಿನ್ ಮಾಡಿ. 1983ರಿಂದ 2002ರವರೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನಾನು ತಂದಿದ್ದೇನೆ. ಎಂಬತ್ತು ಲಕ್ಷ ರೂಪಾಯಿಗಳನ್ನು ರೈತರು ಕಂಟಿನ್ಯೂಯಸ್ ಆಗಿ ಕಟ್ಟಿದ್ದಾರೆ ಮತ್ತು ಅವರು ಡಿಫಾಲ್ಟರ್ ಆಗಿಲ್ಲ.

2002ರ ನಂತರ 2003ರಲ್ಲಿ ಸರ್ಕಾರ ಒಂದು ಆದೇಶವನ್ನು ಹೊರಡಿಸಿ ಏನು ಮನ್ನಾ ಮಾಡಿತ್ತು ಅದರಲ್ಲಿ ಮೋಟರ್ ಕೂಡಿಸಿದ ನಂತರ ಬಾಕಿಯಾದ ಐದು ಲಕ್ಷ ರೂಪಾಯಿ ಮನ್ನಾ ಆಗಿದೆ. ಅದರ ನಂತರ ಇವತ್ತು ಮತ್ತೆ ಬಿಲ್ಲನ್ನು ಕಳಿಸಿದ್ದಾರೆ. ಈ ಮೂರು ಪಂಪ್‌ಸೆಟ್ಟುಗಳಿಗೆ ಸಂಬಂಧಪಟ್ಟಂತೆ ಎಂದು ಬಿಲ್ಲನ್ನು ಕಳುಹಿಸಿದ್ದಾರೆ ಎಂದರೆ 22.1.2005ರಲ್ಲಿ. ಇದು ಒಂದೇ ಯೋಜನೆಗೆ 40 ಹೆಚ್.ಪಿ.ಯದ್ದು ಎರಡು ಮತ್ತು 50 ಹೆಚ್.ಪಿ.ಯದ್ದು ಒಂದು. ಇದು ಒಂದು ವರ್ಷದ ಬಿಲ್ ಎಷ್ಟು ಕಳುಹಿಸಿದ್ದಾರೆ ಎಂದರೆ 5 ಲಕ್ಷ 92 ಸಾವಿರ 607 ರೂಪಾಯಿಗಳು. 316 ಎಕರೆ ಜಮೀನಿಗೆ ನೀರಾವರಿ ಮಾಡಿಕೊಳ್ಳುವುದಕ್ಕೆ 5,92,607 ರೂಪಾಯಿ ಬಿಲ್ ಹಾಕಿದರೆ, ಈ ದೇಶದಲ್ಲಿ ರೈತರು ಬದುಕುವುದಕ್ಕೆ ಸಾಧ್ಯ ಇದೆಯಾ? ಈ ರಾಜ್ಯದಲ್ಲಿ ರೈತರು ಬದುಕುವುದಕ್ಕೆ ಸಾಧ್ಯವಿದೆಯಾ? ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಅಧ್ಯಕ್ಷರು:– ಮಾನ್ಯ ಕಾರಜೋಳರವರೇ, ಮೋಟರ್ ಹಾಕಿಲ್ಲವೇನು?

ಶ್ರೀ ಗೋವಿಂದ ಎಂ. ಕಾರಜೋಳ:– ಮೋಟರ್ ಹಾಕಿದ್ದಾರೆ. ಮೋಟರ್ ಹಾಕಿ ಆರ್.ಆರ್. ನಂಬರನ್ನೂ ಕೊಟ್ಟಿದ್ದಾರೆ. ಆರ್.ಆರ್. ನಂಬರ್ ಐಪಿ 50, ಐಪಿ51 ಮತ್ತು ಐಪಿ52 ಎಂದು ಮೂರು ಮೋಟರ್‌ನ್ನು ಹಾಕಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ರೈತ ಯಾವುದೇ ಮೂಲದಿಂದ ನೀರಾವರಿ ಮಾಡಲಿ, ಮಳೆಯಿಂದ ಮಾಡಲಿ, ಭಾವಿಯಿಂದ ಮಾಡಲಿ, ಬೋರ್‌ವೆಲ್‌ನಿಂದ ಮಾಡಲಿ, ಅವರೆಲ್ಲರಿಗೂ ಕೂಡ ಒಂದೇ ರೇಟ್‌ನ್ನು ನಿಗದಿ ಮಾಡಬೇಕು. 540 ರೂಪಾಯಿಗಳಿಗೆ ಇವತ್ತು ಏನು ರೈತರು ಸ್ವಂತಕ್ಕೆ ಅರ್ಜಿ ಕೊಟ್ಟ ಮರುಘಗಳಿಗೆ ಮಾಡಿಕೊಂಡಿದ್ದಾರೆ ಅದೇ ರೇಟ್‌ನ್ನು ಇದಕ್ಕೂ ಕೂಡ ಮಾಡಬೇಕು. ಮತ್ತು ಹಿಂದೆ ನೀವೇನು ಬಿಲ್ ಕಳುಹಿಸಿದ್ದೀರಿ ದಯಮಾಡಿ ಅದನ್ನು ಮನ್ನಾ ಮಾಡಬೇಕು. ಏಕೆಂದರೆ ಅವರು 80 ಲಕ್ಷ ರೂಪಾಯಿಗಳನ್ನು ತುಂಬಿದ್ದಾರೆ. ತಾವು ಯೋಚನೆ ಮಾಡಿ....

ಅಧ್ಯಕ್ಷರು:– ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಕೇಳಿ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಉತ್ತರ ಕೇಳಿದ್ದರೋ ಅದಕ್ಕೆ ಉತ್ತರವನ್ನು ಸಂಬಂಧಪಟ್ಟ ಅಧಿಕಾರಿಗಳು ಕೊಟ್ಟಿದ್ದಾರೆ. ಅದೇನು ಅವರ ಹತ್ತಿರ ಬಿಲ್ ಇದೆ, ಅದೆಲ್ಲವನ್ನೂ ಕೊಟ್ಟರೆ ಮಾಹಿತಿಯನ್ನು ತರಿಸಿ ನಾನು ಸರಿಯಾದ ಉತ್ತರವನ್ನು ಅವರಿಗೆ ಕೊಡುತ್ತೇನೆ. ಏಕೆಂದರೆ ಇದರಲ್ಲಿ ನಮ್ಮದು ಅಂದರೆ ಸರ್ಕಾರದ ಹಸ್ತಕ್ಷೇಪ ಏನೂ ಇಲ್ಲ. ಇದು ನಾಲ್ಕು ಕಂಪನಿಗಳಿದ್ದು ದರ ನಿಗದಿಪಡಿಸುವುದು ಕೆ.ಇ.ಆರ್.ಸಿ.ಯವರು. ಕೆ.ಆರ್.ಇ.ಸಿ.ಯಲ್ಲಿ ಎಷ್ಟೆಷ್ಟು ಹೆಚ್.ಪಿ.ಗೆ ಏನು ದರ ನಿಗದಿ ಪಡಿಸುವುದನ್ನು ಹಿಂದಿನ ದಿನಗಳಲ್ಲಿ ಅವರು ಮಾಡಿದ್ದಾರೆ. ಇದರ ಬಗ್ಗೆ ಈಗಾಗಲೇ ನಾವು ಮತ್ತು ನೀರಾವರಿ ಮಂತ್ರಿಗಳು ಒಂದು ಸಭೆಯನ್ನು ಮಾಡಿದ್ದೇವೆ. ಕೆಲವು ಕಡೆ ಏನಾಗಿದೆ ಎಂದರೆ ಬೆಳಗಾವಿ ಜಿಲ್ಲೆ ಇರಬಹುದು, ಅಥವಾ ಉತ್ತರ ಕರ್ನಾಟಕದ ಕೆಲವು ಭಾಗದಲ್ಲಿ ಸ್ವಂತವಾಗಿ ರೈತರು ಏತ ನೀರಾವರಿ ಇಟ್ಟುಕೊಂಡಿರಬಹುದು ಅಥವಾ ನೀರಾವರಿ ಇಲಾಖೆಯಿಂದ ಏತನೀರಾವರಿಯನ್ನು ಮಾಡುತ್ತಿರಬಹುದು, ಅದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ನಾನು ನಮ್ಮ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನೀರಾವರಿ ಇಲಾಖೆಯ ಕಾರ್ಯದರ್ಶಿ ಮತ್ತು ಈ ನಾಲ್ಕು ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರುಗಳ ಒಂದು ಸಮಿತಿಯನ್ನು ಮಾಡಿದ್ದೇನೆ. ಅದನ್ನೆಲ್ಲಾ ತರಿಸಿ ಯಾವ ಲೈನ್ ಮಾಡಬೇಕು,

ಅದಾದಮೇಲೆ ಕೆ.ಇ.ಆರ್.ಸಿ.ಗೆ ಮನರ್ ಏನಾದರೂ ಅರ್ಜಿ ಹಾಕುವುದಿದ್ದರೆ ಅದನ್ನು ಹಾಕುವಂತಹ ಕಾರ್ಯಕ್ರಮವನ್ನು ನಾವು ಮಾಡುತ್ತೇವೆ. ಮಾನ್ಯ ಸದಸ್ಯರು ಏನು ಮಾಹಿತಿಯನ್ನು ಕೊಟ್ಟಿದ್ದಾರೆ.....

ಶ್ರೀ ಗೋವಿಂದ ಎಂ. ಕಾಜೋಳ:– ಮಾನ್ಯ ಅಧ್ಯಕ್ಷರೆ, ಇರತಕ್ಕಂಥ ಲಕ್ಷಾಂತರ ರೂಪಾಯಿ ಬೆಲೆಯ ಪಂಪ್‌ಸೆಟ್ಟುಗಳಿಗೆ.....

ಅಧ್ಯಕ್ಷರು:– ಅವರು ಏನು ಹೇಳುತ್ತಾರೆ ಎಂದು ಕೇಳಿ. ಅನಂತರ ಏನಾದರೂ ನಿಮ್ಮ ಸಲಹೆ ಇದ್ದರೆ ಕೊಡಿ. ಮೊದಲು ಅವರು ಉತ್ತರ ಕೊಡಲಿ.

ಶ್ರೀ ಹೆಚ್.ಡಿ. ರೇವಣ್ಣ:– ಈಗ ತಾವು ಹಿಂದೆ ಮಾಡಿದ್ದರು ಎಂದು ಏನು ಹೇಳಿದಿರಿ ಅದನ್ನು ನಾನು ಮಾಡಿಲ್ಲ. ಅದು ನಾಲ್ಕು ಕಂಪನಿಗಳು ಇವೆ ಮತ್ತು ಕೆ.ಇ.ಆರ್.ಸಿ.ಯವರ ಮುಂದೆ ಹೋಗಿ ರೇಟ್ ಫಿಕ್ಸ್ ಮಾಡುವವರು ಅವರು. ಅದಕ್ಕಾಗಿ ನಾನು ಈಗಾಗಲೇ ಕೆಲವು ಕಡೆ ಸ್ವಂತ ಲಿಫ್ಟ್ ಇರಿಗೇಶನ್ ಇರಬಹುದು ಅಥವಾ ನೀರಾವರಿ ಇಲಾಖೆಯ ಲಿಫ್ಟ್‌ಇರಿಗೇಶನ್ ಇರಬಹುದು, ಕೆಲವು ಕಡೆ ರೈತರಿಗೆ ತೊಂದರೆ ಆಗಿದೆ ಎನ್ನುವ ದೃಷ್ಟಿಯಿಂದಲೇ ಈಗ ನಮ್ಮ ಇಂಧನ ಕಾರ್ಯದರ್ಶಿಗಳು, ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಮತ್ತು ಸಂಬಂಧಪಟ್ಟಂಥ ಕಂಪನಿಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಮತ್ತೆ ಇದರ ಬಗ್ಗೆ ಮನರ್ ಪರಿಶೀಲನೆ ಮಾಡಿ ಯಾವ ರೇಟ್‌ನ್ನು ಇಡಬೇಕೆಂದು ನೋಡಿ, ರೈತರಿಗೆ ಅನುಕೂಲವಾಗುವಂತ ರೀತಿಯಲ್ಲಿ ಸಲಹೆ ಕೊಡಿ ಎಂದು ಈಗಾಗಲೇ ನಾನು ಕೇಳಿದ್ದೇನೆ. ಈ ಬಗ್ಗೆ ಒಂದು ವಾರದ ಹಿಂದೆ ಮೀಟಿಂಗ್ ಮಾಡಿದ್ದೇನೆ. ನಿಮ್ಮ ಹತ್ತಿರ ಏನು ದಾಖಲೆ ಇದೆ ಅದನ್ನು ಕಳುಹಿಸಿಕೊಡಿ. ಸಂಬಂಧಪಟ್ಟ ಕಂಪನಿ ಅದು ಗೆಸ್ಕಾಮ್‌ಗೆ ಬರಬಹುದು, ಇಲ್ಲ ಎಸ್ಕಾಮ್‌ಗೆ ಬರಬಹುದು. ಎಸ್ಕಾಮ್‌ಗೆ ಬಂದರೆ ಮಾಹಿತಿಯನ್ನು ತರಿಸಿ ಪರಿಶೀಲನೆ ಮಾಡಿ ಕಾನೂನು ರೀತಿಯಲ್ಲಿ ಅದನ್ನು ಮಾಡಿಸಿಕೊಡುವುದಕ್ಕೆ ನಾನು ಪ್ರಯತ್ನ ಪಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಬಹಳ ಸ್ಪಷ್ಟವಾಗಿ ಕೇಳಿದ್ದೇನೆ. ಲಕ್ಷಾಂತರ ಪಂಪ್‌ಸೆಟ್ಟುಗಳು ರೈತರದ್ದು ಇವೆ. ಅವುಗಳಿಗೆ ಒಂದು ವರ್ಷಕ್ಕೆ ಒಂದು ಹೆಚ್.ಪಿ.ಗೆ 540 ರೂಪಾಯಿಗಳು ಎಂದು ನಿಗದಿ ಮಾಡಿದ್ದೀರಿ. ಅದೇ ರೇಟ್‌ನ್ನು ಇವರಿಗೂ ಅನ್ವಯವಾಗುವಂತೆ ಮಾಡಿ ಎಂದು ನಾನು ಕೇಳುತ್ತಿದ್ದೇನೆ. ಏಕೆ ಕೇಳುತ್ತಿದ್ದೇನೆ ಎಂದರೆ ಈ ರೈತರು ಏನೂ ಪಾಪ ಮಾಡಿಲ್ಲ. ಇವರು ಸರ್ಕಾರಕ್ಕೆ ಉಪಕಾರ ಮಾಡಿದ್ದಾರೆ. ಸರ್ಕಾರದ ಜವಾಬ್ದಾರಿ ಇದೆ ಮತ್ತು ಅವರೇ ನೀರಾವರಿಯನ್ನು ಮಾಡಿಕೊಡಬೇಕಾಗಿತ್ತು. ಆದರೆ ಅದನ್ನು ಮಾಡಿಕೊಟ್ಟಿಲ್ಲ. ಹೀಗಿರುವಾಗ ಅವರು ಸ್ವಂತ ಖರ್ಚಿನಲ್ಲಿ ಮಾಡಿದ್ದಾರೆ. ಇದಕ್ಕಾಗಿ ಅವರು ಸಾಲಸೋಲ ಮಾಡಿದ್ದಾರೆ, ಬಡ್ಡಿ ಕಟ್ಟಿದ್ದಾರೆ. ಅಂತಹವರಿಗೆ ಇಂತಹ ಒಂದು ಸಣ್ಣ ರಿಯಾಯಿತಿಯನ್ನು ನೀವು ಕೊಡದೇಹೋದರೆ ನೀವು ನೀರಾವರಿಗೆ ಯಾವರೀತಿ ಪ್ರೋತ್ಸಾಹ ನೀಡುತ್ತೀರಿ ಎಂದು ನಾವು ಪ್ರಶ್ನೆ ಮಾಡಬೇಕಾಗುತ್ತದೆ. **ಮಾನ್ಯ ಅಧ್ಯಕ್ಷರೆ,** ಇವತ್ತು ಮಾನ್ಯ ಸಚಿವರು ತಾವು ಇದ್ದಂಥ ಸಂದರ್ಭದಲ್ಲಿ ಮಾಡಿಲ್ಲ ಎಂದು **ಹೇಳಿದರು.** ಹಿಂದೆ ಇದ್ದಂಥವರು ರೈತರು ಮಕ್ಕಳು ಅಲ್ಲ ಎನ್ನುವ ಕಾರಣಕ್ಕೆ ಈ ರೀತಿ ಮಾಡಿದ್ದಾರೆ. ಇವತ್ತು ತಾವು ರೈತರ ಮಕ್ಕಳಿದ್ದೀರಿ, ರೈತರ ಬಗ್ಗೆ ಕಳಕಳಿ ಇದ್ದವರು ಇದ್ದೀರಿ. ದಯಮಾಡಿ ತಾವು ಈ ಸದನದಲ್ಲಿ ಒಪ್ಪಿಕೊಳ್ಳಿ. 540 ರೂಪಾಯಿ ಮಾಡಿದ್ದೇನೆ ಎಂದು ಹೇಳಿ ಬಿಡಿ, ನಾನು ಬಹಳ ಸಂತೋಷಪಟ್ಟು ತಮಗೆ ಧನ್ಯವಾದಗಳನ್ನು ಹೇಳಿ ಕುಳಿತುಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಸ್ವಂತ ನಿರ್ಣಯ ಮಾಡುವುದಕ್ಕೆ ನನಗೆ ಅಧಿಕಾರ ಇಲ್ಲ. ದರ ನಿಗದಿಪಡಿಸುವುದು ಕೆ.ಇ.ಆರ್.ಸಿ.ಯವರು ಅವರು ನಿಗದಿಪಡಿಸಿದಂಥಾದ್ದರಲ್ಲಿ ನಾಲ್ಕು ಕಂಪನಿಗಳು ಯಾವ್ಯಾವ ಐ.ಪಿ.ಸೆಟ್‌ಗಳಿಗೆ, ಒಂದು ಹೆಚ್.ಪಿ. ಇರಬಹುದು, ಎರಡು ಹೆಚ್.ಪಿ. ಇರಬಹುದು, ಐದು ಹೆಚ್.ಪಿ. ಇರಬಹುದು, ಅಥವಾ ಹತ್ತು ಹೆಚ್.ಪಿ. ಇರಬಹುದು, ಅದಕ್ಕೆ ಪ್ರತಿ ಹಂತದಲ್ಲಿ ಒಂದು ಮಿತಿಯನ್ನು ಹಾಕಿದ್ದಾರೆ. ಬೇಕಾದರೆ ತಾವು ಒಂದು ಕೆಲಸ ಮಾಡಿ. ತಾವು ವಿರೋಧ ಪಕ್ಷದ ನಾಯಕರು, ಉಪನಾಯಕರು ಇದ್ದೀರಿ. ನನಗೆ ರೈತರ ಬಗ್ಗೆ ಕಾಳಜಿ ಹೆಚ್ಚಿಗೆ ಇದೆ. ಏಕೆಂದರೆ ನಮ್ಮ ವಿದ್ಯುತ್ ಇಲಾಖೆಯ ಪರಿಸ್ಥಿತಿಯನ್ನು ತಾವು ನೋಡಿ. ಬೇಕಾದರೆ ಒಂದು ದಿವಸ ಚರ್ಚೆಯನ್ನು ಮಾಡಿ. ಮಾನ್ಯ ಸಭಾಧ್ಯಕ್ಷರು ಅದಕ್ಕೆ ಒಪ್ಪಿಗೆ ಕೊಡುವುದಾದರೆ ನನ್ನದೇನೂ ಇಲ್ಲ. ಏಕೆಂದರೆ ಇವತ್ತು ನಾವು ರೈತರ ದೃಷ್ಟಿಯಿಂದ ಇದನ್ನು ನೋಡಬೇಕಾಗಿದೆ. ಮಾನ್ಯ ಹಣಕಾಸು ಮಂತ್ರಿಗಳು ಇಲ್ಲೇ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ನಾನು ಮನವಿಯನ್ನು ಮಾಡುತ್ತೇನೆ. ಇದರ ಬಗ್ಗೆ ಏನು ಸಲಹೆಯನ್ನು ಕೊಟ್ಟರೂ ಅದನ್ನು ಸ್ವೀಕಾರ ಮಾಡಿ ಮಾಡುವುದಕ್ಕೆ ನಾನು ತಯಾರಿದ್ದೇನೆ. ಆದರೆ ಇದರ ಬಗ್ಗೆ ಕೆ.ಇ.ಆರ್.ಸಿ. ಮುಂದೆಯೇ ಹೋಗಬೇಕೇ ಹೊರತು ನಾನು ಯಾವುದೇ ರೇಟ್‌ನ್ನು ನಿಗದಿಪಡಿಸಬೇಕಾದರೆ ನನಗೆ ಅಧಿಕಾರ ಇಲ್ಲ. ಆ ಅಧಿಕಾರ ಎಲ್ಲ ಇರುವುದು ಕೆ.ಇ.ಆರ್.ಸಿ.ಗೆ ಮಾತ್ರ. ಅದರ ಮುಂದೆ ನಮ್ಮ ನಾಲ್ಕು ಕಂಪನಿಗಳವರು ಒಂದು ರೇಟ್‌ನ್ನು ನಿಗದಿಪಡಿಸಿದ್ದು ಇರುತ್ತದೆ. ಆ ಟೈಮ್‌ನಲ್ಲಿ ಯಾರಾದರೂ ಆಕ್ಷೇಪಣೆ ಇದ್ದರೆ ಹಾಕಬೇಕಾಗಿತ್ತು. ಆದರೆ ಹಾಗೆ ಯಾರೂ ಹಾಕಿಲ್ಲ. ಹಿಂದೆ ಯಾರಾದರೂ ಆಬ್ಜೆಕ್ಷನ್ ಹಾಕಿ ತಕರಾರು ಮಾಡಿ ಈ ತರಹ ಇದೆ, ಒಂದು ರೂಪಾಯಿ 75ಪೈಸೆ ಇದಕ್ಕೆ ಬಿಡುತ್ತಿದ್ದೀರಿ, ಎಂದು ಹೇಳಬೇಕಿತ್ತು. ಕೆಲವಕ್ಕೆ ಐ.ಪಿ.ಸೆಟ್‌ಗೆ ನಲ್ವತ್ತು ಪೈಸೆಗೆ ಕೊಡುತ್ತಿದ್ದೇವೆ: ನಾವು ಖಾಸಗಿಯವರಿಂದ ಏನು ತೆಗೆದುಕೊಳ್ಳುತ್ತಿದ್ದೇವೆ ಅಥವಾ ಸರ್ಕಾರದ ಮೂಲಕ ಕೆ.ಪಿ.ಸಿ. ಇರಬಹುದು ಅಥವಾ ಕೇಂದ್ರ ಸರ್ಕಾರದ ಗ್ರಿಡ್‌ನಿಂದ ಏನು ತೆಗೆದುಕೊಳ್ಳುತ್ತಿದ್ದೇವೆ ಎಂಬುದು ತಮಗೆಲ್ಲಾ ಗೊತ್ತಿದೆ. ಆದರೆ ಈ ಪರಿಸ್ಥಿತಿ ಇರುವಾಗ ಬೇಕಾದರೆ ಇದರ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಲಿ. ಸನ್ಮಾನ್ಯ ಅಧ್ಯಕ್ಷರನ್ನು ನಾನು ಮನವಿ ಮಾಡುತ್ತೇನೆ. ಏಕೆಂದರೆ ಸುಮ್ಮನೆ ಸುಳ್ಳು ಆಶ್ವಾಸನೆಯನ್ನು ಸದನದ ಮೂಲಕ ಕೊಡಬಾರದು.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಗಳಲ್ಲಿ ಒಂದು ವಿನಂತಿಯನ್ನು ಮಾಡುತ್ತೇನೆ. ಈ ರಾಜ್ಯದಲ್ಲಿ ಇರುವಂತಹ ಬಹುತೇಕ ಲಿಫ್ಟ್ ಇರಿಗೇಶನ್‌ಗಳು ಈಗಾಗಲೇ ಮುಚ್ಚಿಹೋಗಿರುವುದು ನಿಮಗೆ ಗೊತ್ತಿರುವಂಥಾದ್ದು. ನೀರಾವರಿ ವ್ಯವಸ್ಥೆಗೋಸ್ಕರ ಪ್ರತಿ ವರ್ಷ ನಾವು ಎರಡೂವರೆ–ಮೂರು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಯಾರಿಗೆ ನೀರಿನ ಅನುಕೂಲ ಇಲ್ಲ ಅವರು ಸಾಲಸೋಲ ಮಾಡಿ ಈ ತರಹ ಮಾಡಿದಾಗ ಅವರನ್ನು ಈ ರೀತಿ ಶೋಷಣೆ ಮಾಡಿದರೆ ಅವರು ಬದುಕುವುದಕ್ಕೆ ಆಗುವುದಿಲ್ಲ. ರೈತರ ಸ್ಥಿತಿ ಏನಾಗುತ್ತದೆ ಎಂದು ರೈತರಾದ ತಮಗೆ ಚೆನ್ನಾಗಿ ಗೊತ್ತು. ಆದ್ದರಿಮದ ಇವರನ್ನು ಉಳಿಸಿಕೊಳ್ಳುವುದಕ್ಕೆ ಏನು ಮಾಡುತ್ತೀರಿ? ನಮ್ಮ ಮಾನ್ಯ ಕಾರಜೋಳ ಅವರು ಕೇಳಿರುವುದು ಇದು ಮೊದಲನೆಯದು. ಎರಡನೆಯದು, ತಮಗೆ ಗೊತ್ತಿರುವಹಾಗೆ ನೀವು ಪಾಲಿಸಿ ಡಿಸಿಶನ್ ಏನಾದರೂ ತೆಗೆದುಕೊಂಡಿದ್ದೀರಾ? ಈ ರಾಜ್ಯದ ರೈತರಿಗೆ ಉಚಿತವಾಗಿ ವಿದ್ಯುತ್ ಕೊಡುತ್ತೇವೆ ಎಂದು ಏನಾದರೂ ತಾವು ಯೋಜನೆಯನ್ನು ಮಾಡಿದ್ದೀರಾ? ಮತ್ತೆ ಈಗಾಗಲೇ ಕೆಲವು ಕಡೆ ಬರಗಾಲಕ್ಕೆ ಸಿಕ್ಕಿ ಬಾಕಿ

ಕಟ್ಟುವುದಕ್ಕೆ ಆಗಿಲ್ಲ ಅಂತಹೇಳಿ ಮಾನ್ಯ ಅಶೋಕ್ ಅವರ ಪ್ರಶ್ನೆ ಬಂದಿತ್ತು. ಆಗ ಅವರು ಇರಲಿಲ್ಲ. ಬೆಂಗಳೂರು ಮತ್ತು ಬೆಂಗಳೂರು ಗ್ರಾಮಂತರದಲ್ಲಿ 550 ಪಂಪಸೆಟ್‌ಗಳನ್ನು ಡಿಸ್‌ಕನೆಕ್ಟ್ ಮಾಡಿದ್ದೀರಿ. ಸ್ವತಃ ಮುಖ್ಯಮಂತ್ರಿಗಳಾದ ಮಾನ್ಯ ಧರ್ಮಸಿಂಗ್ ಅವರು ಗುಲ್ಬರ್ಗಾಕ್ಕೆ ಹೋದಾಗ ಬರಗಾಲದ ಇಂತಹ ಸಂದರ್ಭದಲ್ಲಿ ಡಿಸ್‌ಕನೆಕ್ಟ್ ಮಾಡಬಾರದು ಎಂದು ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಡಿಸ್‌ಕನ್‌ಕ್ಟ್ ಮಾಡಿರುವುದಕ್ಕೆ ಈಗಲೇ ಸೂಚನೆಯನ್ನು ಕೊಟ್ಟು ಹಂತಹಂತವಾಗಿ ಅಲ್ಪಸ್ವಲ್ಪ ಕಟ್ಟುವುದಕ್ಕೆ ಅವಕಾಶ ಮಾಡಿಕೊಡಿ. ಲಿಫ್ಟ್ ಇರಿಗೇಶನ್‌ಗೆ ಅವರಿಗೆ ಏನಾದರೂ ದರ ಕಡಿಮೆ ಮಾಡಿ ಅನುಕೂಲ ಮಾಡಿಕೊಡುವುದಕ್ಕೆ ಒಂದು ಸ್ಪಷ್ಟವಾದ ತೀರ್ಮಾನ ತೆಗೆದುಕೊಳ್ಳುತ್ತೀರಾ?

ಶ್ರೀ ಹೆಚ್.ಡಿ.ರೇವಣ್ಣ:– ಮಾನ್ಯ ವಿರೋಧ ಪಕ್ಷದ ನಾಯಕರು 534 ಐ.ಪಿ.ಸೆಟ್ ಗಳನ್ನು ಡಿಸ್‌ಕನೆಕ್ಟ್ ಮಾಡಿದ್ದಾರೆ ಎಂದು ಹೇಳಿದರು. ಈ 534 ಡಿಸ್‌ಕನೆಕ್ಟ್ ಮಾಡಿರುವುದು ಹಣಕಾಸು ಉಳ್ಳಂಥವರದ್ದು. ಅವರಲ್ಲಿ ಬಡವರು ಯಾರಾದರೂ ಇದ್ದರೆ ಪರಿಶೀಲನೆ ಮಾಡಿ ಅವರಿಗೆ ಇನ್ನೂ ಎರಡು ದಿವಸ ಅವಕಾಶ ಮಾಡಿಕೊಡಬಹುದಾಗಿತ್ತು. ಆದರೆ ಅವರು ಹಣ ಉಳ್ಳವರು ಮತ್ತು ಕಟ್ಟುವುದಕ್ಕೆ ಅವರಿಗೆ ಏನೂ ತೊಂದರೆ ಇಲ್ಲ. ಏಕೆಂದರೆ ನಮ್ಮ ಅಧಿಕಾರಿಗಳನ್ನು ನಾನು ಕೇಳಿದೆ ಏನೆಂದರೆ ಏನಾದರೂ ಬಡರೈತರದ್ದು ಇದ್ದರೆ ಹೇಳಿ ಎಂದು. ಆದರೆ ಈ 534 ಐ.ಪಿ.ಸೆಟ್ ಹೊಂದಿರುವವರು ಉತ್ತಮವಾಗಿ ಅನುಕೂಲವಾಗಿರತಕ್ಕಂಥ ಸಾಹುಕಾರರುಗಳು ಸ್ವಾಮಿ ಎಂದು ಅವರು ಹೇಳುತ್ತಾರೆ. ಬೇಕಾದರೆ ನಾನು ಚೆಸ್ಕಾಮ್‌ನದ್ದು ಇಂಡಿವಿಜ್ಯುಯಲ್ ಆಗಿ ಲಿಸ್ಟ್‌ನ್ನು ತರಿಸಿಕೊಡುತ್ತೇನೆ. ಅವರು 534 ಜನರಲ್ಲಿ ಬಡವರದ್ದು ಏನಾದರೂ ಇದ್ದರೆ ಹೇಳಿ. ಅವರಿಗೆ ಸ್ವಲ್ಪ ಕಾಲಾವಕಾಶ ಕೊಡಿಸೋಣ ಆದರೆ ಸಾಹುಕಾರರು ಇದ್ದಾಗ, ಹಣ ಕಟ್ಟುವಂಥ ಪರಿಸ್ಥಿತಿ ಇರುವವರು ಇದ್ದರೆ ಕಟ್ಟಲಿ. ಕಟ್ಟಲಿಕ್ಕೆ ಆಗದೇ ಇದ್ದರೆ ಇನ್ನೂ ಸ್ವಲ್ಪ ಅವಕಾಶ ಕೊಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಮಂತ್ರಿಗಳು ಸರ್ಕಾರದ ನೀತಿ ಏನು? ಬಡವರಿಗೆ ಒಂದು ನೀತಿ, ಶ್ರೀಮಂತರಿಗೆ ಒಂದು ನೀತಿ ಅಂತ ಇದೆಯಾ? ನಿಮ್ಮ ಸರ್ಕಾರದ ನೀತಿಯನ್ನು ಹೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ:– ಬಡವರಿಗೆ ಒಂದು ನೀತಿ, ಸಾಹುಕಾರರಿಗೆ ಒಂದು ನೀತಿ ಅಂತ ಏನೂ ಇಲ್ಲ.

(ಗೊಂದಲ)

ಅಧ್ಯಕ್ಷರು:– ಇದರ ಬಗ್ಗೆ ಸಮಗ್ರವಾದ ಚಿಂತನೆ ಮತ್ತು ಚರ್ಚೆಯ ಅಗತ್ಯವಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದ್ದರಿಂದ, ಎಲ್ಲಾ ಪಕ್ಷದವರೂ ಸೇರಿಕೊಂಡು ಒಂದು ಸಮಗ್ರವಾಗಿ ಚಿಂತನೆ ಮಾಡಿ ಒಂದು ನೀತಿಯನ್ನು ರೂಪಿಸುವುದು ಒಳ್ಳೆಯದು. ಇಷ್ಟು ಹೇಳಿ, ಇದನ್ನು ಇಲ್ಲಿಗೇ ಮುಗಿಸೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಆ ಚರ್ಚೆಗೆ ತಾವು ಕಾಲ ನಿಗದಿ ಮಾಡುತ್ತೀರಾ?

ಅಧ್ಯಕ್ಷರು:– ಈಗ ವಿದ್ಯುಚ್ಛಕ್ತಿ ಸಮಸ್ಯೆ ಬಹಳ ಗಂಭೀರವಾಗಿದೆ. ಅದಕ್ಕೆ ಬೇಕಾದರೆ ನಾನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಮಾನ್ಯ ಮಂತ್ರಿಗಳು ಕೆ.ಇ.ಆರ್.ಸಿ.

ಮತ್ತು ಇತರೆ ಕೆಲವು ವಿಚಾರಗಳನ್ನು ಹೇಳಿದರು. ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಲೀ, ಈ ವಿಷಯದಲ್ಲಿ ಒಂದು ನೀತಿ ನಿರೂಪಣೆಯಾಗಲಿ.

ಶ್ರೀ ವಾಟಾಳ್ ನಾಗರಾಜ್:– ಅದರಲ್ಲಿ ಭಾಗ್ಯಜ್ಯೋತಿ ವಿಷಯವನ್ನೂ ತಾವು ಸೇರಿಸಬೇಕು.

ಅಧ್ಯಕ್ಷರು:– ಆಯಿತು. ತಾವು ಮಾತನಾಡುವಾಗ ಅದರ ಬಗ್ಗೆಯೂ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇವತ್ತು ಈ 106 ಜನ ರೈತರು ಏನು ಸಾಮೂಹಿಕ ಏತ ನೀರಾವರಿ ಮಾಡಿಕೊಂಡಿದ್ದಾರೆ ಅವರು ಪ್ರತ್ಯೇಕವಾಗಿ ಅರ್ಜಿ ಕೊಟ್ಟು ವಿದ್ಯುತ್ ತೆಗೆದುಕೊಂಡಿದ್ದರೆ, ಅವರಿಗೆ ನೀವು 540 ರೂಪಾಯಿಗಳನ್ನು ನಿಗದಿ ಮಾಡುತ್ತಿದ್ದಿರೋ ಇಲ್ಲವೋ.

ಅಧ್ಯಕ್ಷರು:– ಅರ್ಧ ಗಂಟೆ ಚರ್ಚೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೇನಲ್ಲಾ ಮತ್ತೆ ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಗೋವಿಂದ ಎಂ. ಕಾರಜೋಳ:– ಭಾಗ್ಯಜ್ಯೋತಿ ಮತ್ತಿತರ ವಿಷಯಗಳಿಗೆ ಹೋಗಿ ನನಗೆ ಉತ್ತರ ಸಿಕ್ಕಿಲ್ಲ. ಇವತ್ತು ಸರ್ಕಾರಕ್ಕೆ ಅಧಿಕಾರ ಇದೆ. ಇದೇನೂ ಅಷ್ಟು ದೊಡ್ಡ ಹೊರೆ ಆಗುವುದಿಲ್ಲ. ಉತ್ತರ ಕರ್ನಾಟಕದ ಮೂರು ಜಿಲ್ಲೆಗಳಲ್ಲಿ ಇವೆ. ಬಿಜಾಪುರ, ಬಾಗಲಕೋಟೆ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಈ ಏತ ನೀರಾವರಿ ಯೋಜನೆಗಳು ಇವೆ. ಇವುಗಳನ್ನು ರೈತರು ಮಾಡಿಕೊಂಡಂಥಾದ್ದು, ಇವುಗಳಿಗೆ ಈ ಏತ ನೀರಾವರಿ ಯೋಜನೆಗಳು ಇವೆ. ಇವುಗಳನ್ನು ರೈತರು ಮಾಡಿಕೊಂಡಂಥಾದ್ದು, ಇವುಗಳಿಗೆ 540 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿಬಿಡಲಿ. ಇವತ್ತು ಸರ್ಕಾರದವರು ಬೇಕಾದಷ್ಟು ಸಬ್ಸಿಡಿ ಕೊಡುತ್ತಿದ್ದಾರೆ.

ಅಧ್ಯಕ್ಷರು:– ನೀವು ಎಲ್ಲಾ ಪ್ರಶ್ನೆ ಕೇಳಿ ಆಯಿತು. ನಾನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಹಾಗಾದರೂ ಮಾತನಾಡುತ್ತಿದ್ದೀರಲ್ಲಾ.

ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯ ವನ್ಯ ವಿಭಾಗದವರು ರೈತರ ಜಮೀನು ಖರೀದಿಸುವ ಬಗ್ಗೆ

11(559) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ, ಹೊಸನಗರ ಹಾಗೂ ಶಿವಮೊಗ್ಗ ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದಿಂದ ಅರಣ್ಯದೊಳಗಿರುವ ರೈತರ ಜಮೀನುಗಳನ್ನು ಖರೀದಿಸಿ (Buy back) ರೈತರನ್ನು ಅರಣ್ಯ ಪ್ರದೇಶದಿಂದ ಹೊರಗೆ ಕಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ವಲಯ ಅರಣ್ಯಾಧಿಕಾರಿಗಳ (ವನ್ಯಜೀವಿ ವಿಭಾಗ) ಕಛೇರಿಯಿಂದ ತೀರ್ಥಹಳ್ಳಿ ಹೊಸನಗರ ಹಾಗೂ ಶಿವಮೊಗ್ಗ ಸಬ್ ರಿಜಿಸ್ಟ್ರಾರ್ ಕಛೇರಿಗೆ ಪತ್ರ ಬರೆದು ಸದರಿ ಪ್ರದೇಶದ ಜಮೀನಿನ ಬೆಲೆಯ ಬಗ್ಗೆ ಮಾಹಿತಿ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಸರ್ಕಾರ ಅರಣ್ಯ ಜಮೀನಿನ ಬೆಲೆಯ ನಿರ್ಧಾರ ಕೈಗೊಳ್ಳಲಾಗಿದೆಯೇ;

ಈ) ಹಾಗಿದ್ದಲ್ಲಿ ಈ ನಿರ್ಧಾರವನ್ನು ಯಾವಾಗ ಕೈಗೊಳ್ಳಲಾಗಿದೆ;